# 3 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ಹಾಗೂ ಸಿಬಿಐ/ಎಸಿಬಿ/ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯ, ಧಾರವಾಡ ಇವರಲ್ಲಿ

**ಎಸ್.ಸಿ. ನಂ.24/2025**

ಅ.ಸಾ.07

ಚಾ.ಸಾ.36

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜ ಎದ್ದಲಗುಡ್ಡ |
| ತಂದೆಯ ಹೆಸರು | : | ಬಸವಣ್ಣೆ |
| ವಯಸ್ಸು | : | 40 ವರ್ಷಗಳು |
| ಉದ್ಯೋಗ | : | ಪಿಎಸ್ ಐ ಅಳ್ನಾವರ ಪೊಲೀಸ ಠಾಣೆ |
| ವಾಸಸ್ಥಳ | : | ಅಳ್ನಾವರ |
| ಸಾಕ್ಷಿಗೆ ದಿನಾಂಕ | : | **09/06/2026** ರಂದು ಪ್ರಮಾಣ ವಚನ ಬೋಧಿಸಲಾಯಿತು. |

## ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 19/07/2023 ರಿಂದ 31/01/2025 ರವರೆಗೆ ಎಲ್ ಅಂಡ್ ಓ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 30/12/2024 ರಂದು ರಾತ್ರಿ 8.30 ನಿಮಿಷಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿದ್ದು ನಿಪಿ-1 ರಂತೆ ದೂರು ಕೊಟ್ಟಿದ್ದು ಅದನ್ನು ದಾಖಲಿಸಿಕೊಂಡಿರುತ್ತೇನೆ. ದೂರಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 (ಸಿ) ಎಂದು ಗುರುತಿಸಲಾಯಿತು. ದೂರು ದಾಖಲಿಸಿದ ನಂತರ ಪ್ರ ವ ವರದಿಯನ್ನು

ಸಿಪಿಸಿ-472 ರವರೊಂದಗೆ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಪ್ರ ವ ವರದಿಯನ್ನು ಈಗ ನಿಪಿ-17 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-17(ಎ)ಎಂದು ಗುರುತಿಸಲಾಯಿತು. ಅದೇ ದಿನ ರಾತ್ರಿ 11-50 ರಿಂದ 12-20 ರವರೆಗೆ ನಿಪಿ-7 ರಂತೆ ಪಿರ್ಯಾದಿಯ ಬಟ್ಟೆ ಮು.ಮಾ -1 ನ್ನು ಜಪ್ತ ಪಡಿಸಿಕೊಂಡು ನಿಪಿ-6 ರಂತೆ ಫೋಟೋ ತೆಗೆಯಿಸಿರುತ್ತೇನೆ. ನಂತರ ನ್ಯಾಯಾಲಯಕ್ಕೆ ಪಿಎಫ್ ಅನ್ನು ಕಳುಹಿಸಿಕೊಟ್ಟಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ-37 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಜಿ ಸಿ ಬಿ ವಕೀಲರಿಂದಃ**

**3.** ಕುರುವಿನಕೊಪ್ಪ ಗ್ರಾಮದಿಂದ ಕಲಘಟಗಿ ಪಟ್ಟಣ ಸುಮಾರು 12 ಕಿಲೋ ಮೀಟರ ಅಂತರದಲ್ಲಿದೆ ಎಂದರೆ ನಿಜ. ಕುರುವಿನಕೊಪ್ಪ ಗ್ರಾಮದಿಂದ ಕಲಘಟಗಿ ಪಟ್ಟಣಕ್ಕೆ ಬರಲು ಸುಮಾರು 20 ರಿಂದ 30 ನಿಮಿಷ ಬೇಕಾಗುತ್ತದೆ ಎಂದರೆ ನಿಜ. ನಿಪಿ-1 ರಲ್ಲಿ ದೂರು ತಡವಾಗಿ ಯಾವ ಕಾರಣಕ್ಕೆ ಕೊಡಲಾಗಿದೆ ಎಂದು ಬರೆದಿಲ್ಲ ಎಂದರೆ ನಿಜ. ಆಕಸ್ಮಿಕವಾಗಿ ಚಾಸಾ-1 ರವರ ಪತ್ನಿ ತೀರಿಕೊಂಡಿದ್ದು, ಸದರಿ ಘಟನಟೆಯ ಕುರಿತು ದೂರು ದಾಖಲು ಆಗಿರಲಿಲ್ಲ, ನಾನು ಉದ್ದೇಶಪೂರ್ವಕ ಘಟನೆ ಎಂದು ತಪ್ಪು ತಿಳುವಳಿಕೆಯಿಂದ ಚಾಸಾ-1 ರವರನ್ನು ಠಾಣೆಗೆ ಕರೆಯಿಸಿ ನಿಪಿ-1 ದೂರನ್ನು ಸೃಷ್ಟಿ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ನಿಪಿ-1 ದೂರಿಗೆ ಅನುಕೂಲವಾಗಲೆಂದು ಮು ಮಾ -1 ಅನ್ನು ಸೃಷ್ಟಿಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ.

*ಎಸ್.ಸಿ.ನಂ.24/2025*

*ಅಸಾ.07*

**4.** ದಿನಾಂಕ 30/12/2024 ರಂದು ರಾತ್ರಿ 8.30 ನಿಮಿಷಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿದ್ದು ನಿಪಿ-1 ರಂತೆ ದೂರು ಕೊಟ್ಟಿದ್ದು ಅದನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ 11-50 ರಿಂದ 12-20 ರವರೆಗೆ ನಿಪಿ-7 ರಂತೆ ಪಿರ್ಯಾದಿಯ ಬಟ್ಟೆ ಮು.ಮಾ -1 ನ್ನು ಜಪ್ತ ಪಡಿಸಿಕೊಂಡು ನಿಪಿ-6 ರಂತೆ ಫೋಟೋ ತೆಗೆಯಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಂತರ ನ್ಯಾಯಾಲಯಕ್ಕೆ ಪಿಎಫ್ ಅನ್ನು ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ತನಿಖೆಯನ್ನು ಚಾಸಾ-37 ರವರಿಗೆ ವಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಅದೆ.

**(ಶ್ರೀಮತಿ ಜರೀನಾ)**
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು ಸಿ.ಬಿ.ಐ./ಎ.ಸಿ.ಬಿ.,
ಲೋಕಾಯುಕ್ತ, ಧಾರವಾಡ.